ಓ ಎಸ್ ನಂಃ399/2020
ಪಿ. ಡಬ್ಲ್ಯೂ ಃ 1

ದಿಃ 06.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಡಿ ಆರ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ಒಂದು ನೋಂದಾಯಿತ ಕ್ರಯದ ಕರಾರುಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ 1 ಎಂದು, ಅದರಲ್ಲಿ ಇರುವ ಪ್ರತಿವಾದಿ 2 ರಿಂದ 5 ರವರ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿ ಪಿ 1 ಎ ದಿಂದ ನಿ ಪಿ 1 ಡಿ ಎಂದು, ತನ್ನ ಸಹಿಯನ್ನು ನಿ ಪಿ 1 ಇ ಎಂದು, ಸಾಕ್ಷಿದಾರರಾದ ಆಂಜನೇಯ ಮತ್ತು ನಾರಾಯಣಪ್ಪ ಇವರ ಸಹಿಗಳನ್ನು ನಿಪಿ ಎಫ್ ಮತ್ತು ಜಿ ಎಂದು, ಪತ್ರ ಬರಹಗಾರರಾದ ಗಿರೀಶ್ ಇವರ ಸಹಿಯನ್ನು ನಿ ಪಿ 1 ಹೆಚ್ ಎಂದು, ಲೀಗಲ್ ನೋಟೀಸ್ ನ ಆಫೀಸ್ ಪ್ರತಿಯನ್ನು ನಿ ಪಿ 2 ಎಂದು, ಅಂಚೆ ರಶೀದಿಗಳನ್ನು ಕೊಟ್ಟಿದ್ದು ಅವುಗಳನ್ನು ನಿಪಿ 3 ರಿಂದ ನಿಪಿ 7 ಎಂದು, ಅಂಚೆ ಸ್ವೀಕೃತಿ ಪತ್ರಗಳನ್ನು ಕೊಟ್ಟಿದ್ದು ಅವುಗಳನ್ನು ನಿಪಿ 8 ರಿಂದ ನಿ ಪಿ 11 ಎಂದು, ಜಾರಿಯಾಗದೆ ವಾಪಸ್ ಬಂದ ಅಂಚೆ ಕವರ್ ನ್ನು ಕೊಟ್ಟಿದ್ದು ಅದನ್ನು ನಿಪಿ 12 ಎಂದು, ಆರ್ ಟಿ ಸಿ ಗಳನ್ನು ಕೊಟ್ಟಿದ್ದು ಅವುಗಳನ್ನು ನಿಪಿ 13 ರಿಂದ ನಿ ಪಿ 15 ಎಂದು, ಎಂ ಆರ್ ಹೆಚ್ 9 ಇದರ ದೃಢೀಕೃತ ಪ್ರತಿಯನ್ನು ನಿ ಪಿ 16 ಎಂದು, ಕಂದಾಯ ರಶೀದಿಯನ್ನು ನಿ ಪಿ 17 ಎಂದು, ವಂಶವೃಕ್ಷದ ಪ್ರಮಾಣಪತ್ರವನ್ನು ನಿಪಿ 18 ಎಂದು, ಇ ಸಿ ಗಳನ್ನು ಕೊಟ್ಟಿದ್ದು ಅವುಗಳನ್ನು ನಿಪಿ 19 ಮತ್ತು ನಿ ಪಿ 20 ಎಂದು ಗುರುತಿಸಲಾಯಿತು. ದಾವೆಯಲ್ಲಿ ಕೋರಿರುವಂತೆ ದಾವೆಯನ್ನು ಡಿಕ್ರಿ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

ಪ್ರತಿವಾದಿಗಳು ಪ್ರತಿವಾದಪತ್ರ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ